property card ಎಂದು ಮಾಡುತ್ತಿದ್ದು, ಅದೇ ರೀತಿ ಗ್ರಾಮಾಂತರದಲ್ಲೂ ಕೂಡ ಒಂದು ತಾಲ್ಲೂಕಿನಲ್ಲಿ ಒಂದೊಂದು ಹಳ್ಳಿಯನ್ನು ಆಂದೋಲನ ರೀತಿ ತೆಗೆದುಕೊಂಡು ಮಾಡಬೇಕು. ಇಲ್ಲವಾದರೆ ಇಡೀ ಊರಿನಲ್ಲಿ ಒಂದು ನಿವೇಶನಕ್ಕೆ ಯಾರಾದರೂ ಒಬ್ಬ ವ್ಯಕ್ತಿ ಅರ್ಜಿ ಕೊಟ್ಟರೆ ಇಡೀ ಊರನ್ನು ಗ್ರಾಮಠಾಣಾ ಸರ್ವೆ ಮಾಡಿ ಸಂಪೂರ್ಣ ದಾಖಲೆ ಕೊಡಬೇಕೆಂದರೆ ಎರಡರಿಂದ ಮೂರು ತಿಂಗಳವರೆಗೆ ಸಮಯ ಬೇಕಾಗುತ್ತದೆ. ಹೆಚ್ಚು-ಕಡಿಮೆಯಾದರೆ ಐದಾರು ತಿಂಗಳಾಗುತ್ತದೆ. ಅಷ್ಟರಲ್ಲಿ ರೈತ ಹೊಟ್ಟೆಪಾಡಿಗೆ, ಮದುವೆ ಮುಂಜಿಗೆ ಅಥವಾ ಮತ್ತೊಂದು ಕಾರಣಕ್ಕೆ ನಿವೇಶನವನ್ನು ಮಾರಾಟ ಮಾಡಬೇಕೆಂದರೆ ಅವನಿಗೆ ನ್ಯಾಯ ಸಿಗುವುದಿಲ್ಲ. ಇಡೀ ರಾಜ್ಯದಲ್ಲಿಯೇ ಇದೊಂದು ದೊಡ್ಡ ಸಮಸ್ಯೆಯಾಗಿದ್ದು, ದಯವಿಟ್ಟು ಇದಕ್ಕೊಂದು ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ಕಂದಾಯ ಸಚಿವರ ಪರವಾಗಿ):- ರಾಘವೇಂದ್ರರವರು ಹೇಳಿರುವಂತಹ ವಿಷಯ ಸ್ವಲ್ಪಮಟ್ಟಿಗೆ ಗ್ರಹಿಸುವುದಕ್ಕೆ ಸಾಧ್ಯವಾಯಿತು. ಅವರ ಪ್ರಶ್ನೆಯಲ್ಲಿರುವ ಸಮಸ್ಯೆಯನ್ನು ಪರಿಶೀಲನೆ ಮಾಡಿ ಸೂಕ್ತವಾದ ಕ್ರಮವನ್ನು ಜರುಗಿಸುತ್ತೇವೆ.

8. ವಿಷಯ : ಚಿಂತಾಮಣಿ ತಾಲ್ಲೂಕಿನಾದ್ಯಂತ ಕುಡಿಯುವ ನೀರಿನ ತೊಂದರೆಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ.

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ):- ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನಾದ್ಯಂತ ಕುಡಿಯುವ ನೀರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕಿನಲ್ಲಿ 428

ಜನವಸತಿಗಳಿದ್ದು, ಇವುಗಳಿಗೆ ಕುಡಿಯುವ ನೀರು ಒದಗಿಸುವ ಸಲುವಾಗಿ ಕೊಳವೆ ಬಾವಿಗಳನ್ನು ಸುಮಾರು 1200 ರಿಂದ 1350 ಅಡಿ ಆಳ ಕೊರೆದರೂ ಸಫಲತೆಯ ಪ್ರಮಾಣವು ಶೇ. 60 ರಷ್ಟು ಇರುತ್ತದೆ. ಆದರೆ ಈ ಸಫಲಗೊಂಡ ಕೊಳವೆ ಬಾವಿಗಳಲ್ಲೂ ಸಹ ಪಂಪು ಮೋಟಾರ್ ಇಳಿಸುವ ಹೊತ್ತಿಗೆ ಬಹುತೇಕ ಕೊಳವೆ ಬಾವಿಗಳಲ್ಲಿ ಇಳುವರಿ ಕಡಿಮೆಯಾಗುತ್ತಿದೆ. ಸತತವಾಗಿ 4 ವರ್ಷಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯು ಬರಗಾಲವನ್ನು ಎದುರುಸುತ್ತಿದೆ. ಈ ಜಿಲ್ಲೆಯಲ್ಲಿ ಯಾವುದೇ ಶಾಶ್ವತ ಮೇಲ್ಮೈ ಜಲಮೂಲಗಳು ಇಲ್ಲದ ಕಾರಣ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕೊಳವೆ ಬಾವಿಗಳನ್ನೇ ಅವಲಂಭಿಸಲಾಗಿರುತ್ತದೆ.

ಕುಡಿಯುವ ನೀರಿಗೆ ತೀವ್ರ ಸಮಸ್ಯೆ ಕಂಡುಬಂದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಚಿಂತಾಮಣಿ ತಾಲ್ಲೂಕಿನಲ್ಲಿ 94 ಜನವಸತಿಗಳಿಗೆ ಟ್ಯಾಂಕರ್‌ಗಳ ಮೂಲಕ ಮತ್ತು 13 ಜನವಸತಿಗಳಿಗೆ ಖಾಸಗಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

2012–13 ರಲ್ಲಿ 13ನೇ ಹಣಕಾಸು ಮತ್ತು NRDWP ಅಡಿಯಲ್ಲಿ ಚಿಂತಾಮಣಿ ತಾಲ್ಲೂಕಿನಲ್ಲಿ **32 ಗುಣಮಟ್ಟಬಾದಿತ ಜನವಸತಿಗಳಿಗೆ "ಶುದ್ಧ ಕುಡಿಯುವ ನೀರಿನ ಘಟಕಗಳನ್ನು"** ಅಳವಡಿಸಲಾಗಿದೆ ಮತ್ತು 2013–14ನೇ ಸಾಲಿನಲ್ಲಿ **14 ಗುಣಮಟ್ಟಬಾದಿತ ಜನವಸತಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕಗಳು** ಮಂಜೂರಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 2014–15 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂ: ಗ್ರಾಅಪ/67/ಗ್ರಾನೀಸ(8)2014 (ಭಾಗ–1) ಬೆಂ. ದಿನಾಂಕ: 31.01.2015 ರಲ್ಲಿ 29 ಶುದ್ಧ ಕುಡಿಯುವ ನೀರಿನ ಘಟಕಗಳನ್ನು 500 ಜನಸಂಖ್ಯೆಗಿಂತಲೂ ಮೇಲ್ಪಟ್ಟ ಜನವಸತಿಗಳಲ್ಲಿ ಅಳವಡಿಸಲು ಮಂಜೂರಾತಿ ದೊರೆತಿರುತ್ತದೆ. ಇವುಗಳನ್ನು KTPP ನಿಯಮ ಮತ್ತು ಸರ್ಕಾರದ ಮಾರ್ಗಸೂಚಿಗಳನ್ವಯ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

2015–16ನೇ ಸಾಲಿನ ದಿನಾಂಕ: 01.04.2015ರ IMIS ವರದಿಯ ಪ್ರಕಾರ ಚಿಂತಾಮಣಿ ತಾಲ್ಲೂಕಿನಲ್ಲಿ ಗುಣಮಟ್ಟಬಾದಿತ 80 ಜನವಸತಿಗಳಿದ್ದು, ಈ ಪೈಕಿ 60 ಜನವಸತಿಗಳು ಫ್ಲೋರೈಡ್ ಮತ್ತು 20 ಜನವಸತಿಗಳು ಇತರೆ ರಾಸಾಯನಿಕ ಕಲುಷಿತತೆಯಿಂದ (ನೈಟ್ರೇಟ್, ಕಬ್ಬಿಣ, ಸೆಲಿನಿಟಿ) ಕೂಡಿರುತ್ತವೆ. 2014–15 ನೇ ಸಾಲಿನಲ್ಲಿ 2ನೇ ಹಂತದ 1000 ಶುದ್ಧೀಕರಣ ಘಟಕಗಳು ಹಾಗೂ 2015–16 ನೇ ಸಾಲಿನ 4000 ಶುದ್ಧೀಕರಣ ಘಟಕಗಳ ಆಯ್ಕೆಯು ಪ್ರಗತಿಯ ಹಂತದಲ್ಲಿರುತ್ತದೆ. ಉಳಿದ ರಾಸಾಯನಿಕ ಕಲುಷಿತಗೊಂಡ ಜನವಸತಿಗಳಿಗೆ 2015–16 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುದಾನ ಲಭ್ಯತೆ ಆಧರಿಸಿ ಆದ್ಯತೆ ಮೇರೆಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಅಂತರ ಜಲದ ಮಟ್ಟ 1000 ಅಡಿಗಿಂತಲ್ಲೂ ಹೆಚ್ಚಾಗಿ ಕುಸಿದಿರುವುದರಿಂದ, ಲಭ್ಯವಾಗುವ ನೀರು ಕಲುಷಿತಗೊಂಡಿರುವುದನ್ನು ಮನಗಂಡು ಸರ್ಕಾರವು ಈ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳಿಗೆ ನೀಡಲಾಗುತ್ತಿರುವ ಅನುದಾನವನ್ನು ₹ 7.50 ಲಕ್ಷಗಳಿಗೆ ಹೆಚ್ಚಿಸಿ NRDWP ವತಿಯಿಂದ ಭರಿಸಲು ಆದೇಶಿಸಿರುತ್ತದೆ. (ಆದೇಶ ಸಂಖ್ಯೆ: ಗ್ರಾಅಪ/67/ಗ್ರಾನೀಸ(8)2015(ಭಾಗ–1), ದಿನಾಂಕ: 30.06.2015)

ಚಿಕ್ಕಬಳ್ಳಾಪುರ ಜಿಲ್ಲೆಗೆ ಅಂತರ್ಜಲ ನಿರಂತರತೆ (Sustainability) ಶೀರ್ಷಿಕೆಯಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲು 2015–16ನೇ ಸಾಲಿನಲ್ಲಿ **₹ 2.39 ಕೋಟಿಗಳ** ಕ್ರಿಯಾ ಯೋಜನೆಯಲ್ಲಿ ಹಂಚಿಕೆ ಮಾಡಲಾಗಿರುತ್ತದೆ. ಇದರಿಂದ ಕೊಳವೆ ಬಾವಿಗಳ ಅಂತರ್ಜಲ ಅಭಿವೃದ್ಧಿ ಹೊಂದಲಾಗುತ್ತದೆ.

ಮೇಲೆ ವಿವರಿಸಿರುವ ಯೋಜನೆಗಳಂತೆ ಚಿಂತಾಮಣಿ ತಾಲ್ಲೂಕಿನ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಅಗತ್ಯ ಮತ್ತು ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು:– ಡಾ: ಎ.ಬಿ. ಮಾಲಕರೆಡ್ಡಿ ಯವರು ಸದನದಲ್ಲಿ ಹಾಜರಿಲ್ಲ.

9. ವಿಷಯ : 2015–16ನೇ ಸಾಲಿನಲ್ಲಿ ಹೇಮಾವತಿ ಜಲಾಶಯ ಯೋಜನಾ ವಲಯ ಮುಖ್ಯ ಇಂಜಿನಿಯರ್ ಕಛೇರಿ ಗೊರೂರು ಇವರ ಲೆಕ್ಕಶೀರ್ಷಿಕೆಯಲ್ಲಿ ಬಿಡುಗಡೆಯಾದ ಅನುದಾನವನ್ನು ಹಂಚಿಕೆ ಮಾಡದಿರುವ ಬಗ್ಗೆ.

ಶ್ರೀ ಸಿ.ಎನ್. ಬಾಲಕೃಷ್ಣ (ಶ್ರವಣಬೆಳಗೊಳ):– ಮಾನ್ಯ ಅಧ್ಯಕ್ಷರೆ, 2015–16 ನೇ ಸಾಲಿನಲ್ಲಿ ಹೇಮಾವತಿ ಜಲಾಶಯ ಯೋಜನಾ ವಲಯ ಮುಖ್ಯ ಇಂಜಿನಿಯರ್ ಕಛೇರಿ ಗೊರೂರು ಇವರ ಲೆಕ್ಕಶೀರ್ಷಿಕೆಯಲ್ಲಿ ಬಿಡುಗಡೆಯಾದ ಅನುದಾನವನ್ನು ಹಂಚಿಕೆ ಮಾಡದಿರುವ ಬಗ್ಗೆ ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು):– ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಾವರಿ ನಿಗಮಕ್ಕೆ 2015–16 ನೇ ಸಾಲಿನಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು (ಸರ್ಕಾರದ ಪತ್ರ ಸಂ:ಜಸಂಇ:19:ಎಂಬಿಐ:2015 (ಭಾಗ–1) ದಿನಾಂಕ:28.04.2015) ನಿಗಮದ ಅಡಿಯಲ್ಲಿ ಬರುವ ಮೂರು ವಲಯಗಳಿಗೆ ನೀರಾವರಿ ಸಾಮರ್ಥ್ಯ ಕಲ್ಪಿಸುವ ಯೋಜನೆಗಳ ಕಾಮಗಾರಿಗಳನ್ನು, ನೀರಾವರಿ ಯೋಜನೆಗಳ ನಿರ್ವಹಣೆ, ನಾಲೆಗಳ ಹಾಗೂ ಅಣೆಕಟ್ಟು ನಾಲೆಗಳ ಅಭಿವೃದ್ಧಿ, ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಅಚ್ಚುಕಟ್ಟು ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಹಾಗೂ ಸಿಬ್ಬಂದಿ ಮತ್ತು ಭೂಸ್ವಾಧೀನ ವೆಚ್ಚಗಳಿಗಾಗಿ ಹಂಚಿಕೆ ಮಾಡಲಾಗಿರುತ್ತದೆ. ಇದಲ್ಲದೆ ಮೂರು ವಲಯಗಳಿಂದ ಕೈಗೊಳ್ಳುವ ವಿವಿಧ ಕಾರ್ಯಕ್ರಮಗಳಾದ ಎಸ್.ಸಿ.ಪಿ., ಟಿ.ಎಸ್.ಪಿ., ಎಸ್.ಡಿ.ಪಿ. ಮತ್ತು ನಬಾರ್ಡ್ ಅಡಿಯಲ್ಲಿ ಹೊಸ ಕಾಮಗಾರಿಗಳನ್ನು ಸಹಾ ಪರಿಗಣಿಸಿ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.